# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

76

ದೂರವಾಣಿ : 0821-251397
ಮೊಬೈಲ್: 9448994744
e-mail :aeecescvvm@yahoo.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ.)
ಚಾ.ವಿ.ಸ.ನಿ.ನಿ., ವಿ.ವಿ.ಮೊಹಲ್ಲಾ ಉಪವಿಭಾಗ,
ಮೈಸೂರು.


ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾ)/ವಿವಿಮೊ-ಉವಿ/2020-21/ 310-311.

ದಿನಾಂಕ : 17.06.2020

18

## ಸಭಾ ನಡಾವಳಿ

ವಿ.ವಿ.ಮೊಹಲ್ಲಾ ನಗರ ಉಪ ವಿಭಾಗದಲ್ಲಿ, ಶ್ರೀಯುತ, ಕಾರ್ಯನಿರ್ವಾಹಕ ಇಂಜಿನಿಯರ್(ವಿ),ವಿ.ವಿ.ಮೊಹಲ್ಲಾ ವಿಭಾಗ, ಚಾವಿಸನಿನಿ, ಮೈಸೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ 16.06.2020 ರಂದು ಮಧ್ಯಾಹ್ನ 03:00 ಗಂಟೆಗೆ ಜರುಗಿದ ಜನ ಸಂಪರ್ಕ ಸಭೆಯಲ್ಲಿ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದು ಕೊರತೆಗಳ ಕುರಿತು ನಡೆದ ಸಭಾ ನಡಾವಳಿ.

### ಹಾಜರಿದ್ದ ಅಧಿಕಾರಿ/ನೌಕರರು:-

1. ಶ್ರೀ ಪಿ.ಚಿಕ್ಕಸಿದ್ದೇಗೌಡ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ವಿಭಾಗ, ಮೈಸೂರು
2. ಶ್ರೀ ಕೇಶವಮೂರ್ತಿ.ಸಿ.ವಿ., ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ಉಪವಿಭಾಗ, ಮೈಸೂರು
3. ಶ್ರೀಮತಿ ಪ್ರತಿಭಾ.ಎಂ, ಸಹಾಯಕ ಇಂಜಿನಿಯರ್ (ತಾಂತ್ರಿಕ), ವಿ.ವಿ.ಮೊಹಲ್ಲಾ ಉಪವಿಭಾಗ, ಮೈಸೂರು
4. ಶ್ರೀಮತಿ ಆರ್.ಹೇಮಲತಾ, ಸಹಾಯಕ ಇಂಜಿನಿಯರ್(ವಿ), ಎಂ.ಜಿ.ಕೊಪ್ಪಲ್ ಶಾಖೆ, ಮೈಸೂರು
5. ಶ್ರೀಮತಿ ಮನುಜ.ಎನ್.ಎನ್, ಸಹಾಯಕ ಇಂಜಿನಿಯರ್(ವಿ), ಒಂಟಿಕೊಪ್ಪಲುಶಾಖೆ, ಮೈಸೂರು
6. ಶ್ರೀ ರಾಜಶೇಖರ್, ಸಹಾಯಕ ಇಂಜಿನಿಯರ್(ವಿ), ಜಯಲಕ್ಷ್ಮಿಪುರಂ ಶಾಖೆ, ಮೈಸೂರು
7. ಶ್ರೀ ಬೋರೇಗೌಡ.ಪಿ.ಬಿ., ಸಹಾಯಕ ಇಂಜಿನಿಯರ್(ವಿ), ಮೇಟಗಳ್ಳಿ ಶಾಖೆ, ಮೈಸೂರು
8. ಶ್ರೀ ಅಬ್ದುಲ್ ಬಾರಿ ಷಹಾಜ್, ಸಹಾಯಕ ಲೆಕ್ಕಾಧಿಕಾರಿ, ವಿ.ವಿ.ಮೊಹಲ್ಲಾ ಉಪವಿಭಾಗ, ಮೈಸೂರು
9. ಶ್ರೀ ಮಹಾಂತಪ್ಪ, ಕಿರಿಯ ಇಂಜಿನಿಯರ್(ವಿ), ಮೇಟಗಳ್ಳಿ ಶಾಖೆ, ಮೈಸೂರು
10. ಶ್ರೀ ಸುರೇಶ್ ಕುಮಾರ್.ಎನ್, ಕಿರಿಯ ಇಂಜಿನಿಯರ್(ವಿ), ಒಂಟಿಕೊಪ್ಪಲು ಶಾಖೆ, ಮೈಸೂರು
11. ಶ್ರೀ ಸುರೇಶ್ ಎಲ್.ಕೆ, ಕಿರಿಯ ಇಂಜಿನಿಯರ್(ವಿ), ಎಂ.ಜಿ.ಕೊಪ್ಪಲು ಶಾಖೆ, ಮೈಸೂರು
12. ಶ್ರೀ ತಿಮ್ಮರಾಜು.ಕೆ.ಟಿ., ಕಿರಿಯ ಇಂಜಿನಿಯರ್(ವಿ), ಜಯಲಕ್ಷ್ಮೀಪುರಂ ಶಾಖೆ, ಮೈಸೂರು

### ಹಾಜರಿದ್ದ ಗ್ರಾಹಕರು:-

1. ಭರತ್‌ಕುಮಾರ್, ಗ್ರಾಹಕರು.
2. ಚಂದ್ರಶೇಖರ್.ಹೆಚ್.ಎನ್., ಗ್ರಾಹಕರು


ಚಾ.ವಿ.ಸ.ನಿ.ನಿ.
ಸಂ. 1042
ತಾ॥ 19-6-2020

ಕಾ.ನಿ.ಇಂ. (ವಿ)
ವಿ.ವಿ. ಮೊಹಲ್ಲಾ ವಿಭಾಗ
ಲೆ.ಅ.
ಲೆ.ಅ.(ಆಂ.ಪ)
ಸ.ಕಾ.ನಿ.ಇಂ(ತಾ)
ಸ.ಇಂ.(ತಾ)
19/6

ಮೊದಲನೆಯದಾಗಿ ಹಿಂದಿನ ಸಭೆಯಲ್ಲಿ ಚರ್ಚೆ ನಡೆದಿದ್ದ ವಿಷಯಗಳ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಅನುಪಾಲನಾ ವರದಿಯನ್ನು ಓದಿ ಗ್ರಾಹಕರ ಕುಂದು ಕೊರತೆಗಳನ್ನು ಈಗಾಗಲೇ ಬಗೆಹರಿಸಿರುವುದಾಗಿ ತಿಳಿಸಿದರು.

**ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡತಿರುತ್ತವೆ.**

| ಕ್ರ ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 2 | ಶ್ರೀ ಭರತ್‌ಕುಮಾರ್, ಮತ್ತು ಶ್ರೀ ಚಂದ್ರಶೇಖರ್.ಹೆಚ್.ಎನ್., #733, 5ನೇ ಮೇನ್, 6ನೇ ಕ್ರಾಸ್, ಬಸವೇಶ್ವರ ನಗರ, ಮೈಸೂರು–16 8892423191 | ಗ್ರಾಹಕರ ಸ್ಥಾವರದೊಳಗಿರುವ CFL Bulb ನಲ್ಲಿ Flickering ಸಮಸ್ಯೆ ಇದ್ದು, Voltage ಸಮಸ್ಯೆ ಇದ್ದಲ್ಲಿ ಪರಿಹರಿಸಲು ಕೋರಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಪ್ರತಿಕ್ರಿಯಿಸಿ ಸದರಿ ಗ್ರಾಹಕರ ಸ್ಥಾವರವು ಮೇಟಗಳ್ಳಿ ಶಾಖಾ ವ್ಯಾಪ್ತಿಗೆ ಒಳಪಡುವುದರಿಂದ, ಮೇಟಗಳ್ಳಿ ಶಾಖಾಧಿಕಾರಿಗಳಿಗೆ ತಕ್ಷಣವೇ ಗ್ರಾಹಕರ ಸ್ಥಾವರಕ್ಕೆ ತೆರಳಿ, Voltage/ತಾಂತ್ರಿಕ ದೋಷವಿದ್ದಲ್ಲಿ ಚಾವಿಸನಿನಿ ನಿಯಮಾವಳಿಯನುಸಾರ ಸಮಸ್ಯೆ ಬಗೆಹರಿಸಲು ಸೂಚಿಸಿದರು. |

ನಂತರ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ವಿಭಾಗ, ಮೈಸೂರು ರವರು ಸಾಮಾನ್ಯ ವಿದ್ಯುತ್ ಸಮಸ್ಯೆಗಳನ್ನು ಮತ್ತು ಅವಶ್ಯಕ ಮಾನ್ಸೂನ್ ಅವಧಿಗೆ ಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಮಾರ್ಗದರ್ಶನ ನೀಡಿದರು. ಸಭೆಯಲ್ಲಿ ಚರ್ಚಿಸಲಾದ ಇತರೆ ವಿಷಯಗಳು:–

೧.ಖಾತರಿಗೊಂಡ ರದ್ದಿಯಾದ ಪರಿವರ್ತಕಗಳು/ಮೀಟರ್‌ಗಳು ಯಾವುದಾದರು ಇದ್ದಲ್ಲಿ, ಈ ಕೂಡಲೇ ಉಗ್ರಾಣಕ್ಕೆ ಹಿಂದಿರುಗಿಸಲು ಕ್ರಮ ಕೈಗೊಳ್ಳಲು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು.

೨.ಉಪಯೋಗಿಸದೇ ಇರುವ ಗುಣಮಟ್ಟದ ಐಡಲ್ ಪರಿವರ್ತಕಗಳು ಇದ್ದಲ್ಲಿ, ತಾಂತ್ರಿಕ ಕಾರ್ಯ ಸಾಧ್ಯತೆಯ ಅನುಸರಿಸಿ ಸದರಿ ಪರಿವರ್ತಕದ ಮೇಲೆ ಅಧಿಕ ಭಾರಗೊಂಡ ಪರಿವರ್ತಕದ ಭಾರವನ್ನು ಹಾಕಲು ಕ್ರಮವಹಿಸಲು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು.

೩.ಖಾತರಿಗೊಂಡ ದುರಸ್ತಿಯಾದ ಪರಿವರ್ತಕಗಳ ಬದಲಿಗೆ Brand New/Repaired Good ಪರಿವರ್ತಕಗಳನ್ನು ಲಭ್ಯತೆಯ ಆಧಾರದ ಮೇಲೆ ಅತೀ ಜರೂರಾಗಿ ಅವಶ್ಯವಿರುವ ಶಾಖೆಗೆ ಒದಗಿಸಿಕೊಡಲು ಆಶ್ವಾಸನೆ ನೀಡಿದರು.

೪.ದಿನಕ್ಕೆರಡು DTC ಸ್ಥಾವರಗಳನ್ನು (ಫೀಡರ್‌ವಾರು) ಪರೀಶೀಲಿಸಿ, ಅಗತ್ಯ ನಿರ್ವಹಣಾ ಕಾಮಗಾರಿಗಳನ್ನು ತಪ್ಪದೇ ಮಾಡಲು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು.

೫.ಪ್ರತಿ ಮಾಹೆಗೆ ೦೨ ಫೀಡರ್‌ನಂತೆ ಅಗತ್ಯ ನಿರ್ವಹಣಾ ಕಾಮಗಾರಿಗಳನ್ನು ತಪ್ಪದೇ ಮಾಡಲು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು.

೬.ಎಲ್ಲಾ ಪವರ್‌ಮೆನ್ ಗಳಿಗೆ ಟಿ ಅಂಡ್ ಪಿ ಮತ್ತು ಸುರಕ್ಷತಾ ಸಾಮಗ್ರಿಗಳನ್ನು ಒದಗಿಸಿ, ಶಿಸ್ತುಬದ್ಧವಾಗಿ ರಿಜಿಸ್ಟರ್ ನಿರ್ವಹಣೆ ಮಾಡಲು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು.

೭.ಪೂರ್ಣಗೊಂಡ ಕಾಮಗಾರಿಗಳಿಗೆ ಕಾಲಕಾಲಕ್ಕೆ ಸಮಾಪನಾ ವರದಿಯನ್ನು ಸಲ್ಲಿಸಲು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು

ಅಂತಿಮವಾಗಿ ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ಸದಸ್ಯರುಗಳಿಗೆ ವಂದಿಸುತ್ತಾ ಸಂಜೆ 4.30 ಗಂಟೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

18/6

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ವಿ.ವಿ.ಮೊಹಲ್ಲಾ ಉಪ ವಿಭಾಗ, ಚಾ.ವಿ.ಸ.ನಿ.ನಿ, ಮೈಸೂರು.

ಪ್ರತಿಯನ್ನು:- ೧.ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ನಗರ ಕಾಮಗಾರಿ ವೃತ್ತ, ಚಾವಿಸನಿನಿ, ಮೈಸೂರು ರವರ ದಯಾಪರ ಮಾಹಿತಿಗಾಗಿ.

೨.ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ವಿಭಾಗ, ಚಾವಿಸನಿನಿ, ಮೈಸೂರು ರವರ ದಯಾಪರ ಮಾಹಿತಿಗಾಗಿ.